**OS. No.23/2021** **PW – 3**

ಪ್ರಮಾಣೀಕರಿಸಲಾದ ದಿನಾಂಕಃ **14.08.2025.**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಕೆ. ಪಿ. ಬಿ  ವಕೀಲರಿಂದಃ</u>

ನಾನು ಬಿ. ಎ.ಓದಿದ್ದೇನೆ. ನನಗೆ ಪ್ರತಿವಾದಿಗಳು ಗೊತ್ತು. 1 ಮತ್ತು 2 ನೇ ಪ್ರತಿವಾದಿಗಳ ಮನೆ ನನ್ನ ಮನೆಯಿಂದ 200 ಮೀ ದೂರದಲ್ಲಿದೆ. 1 ನೇ ಪ್ರತಿವಾದಿಯ ತಂದೆ ಹೆಸರಿನಲ್ಲಿ ದಾವಾಸ್ತಿಗಳ ಜಮಾಬಂದಿ  ಇದೆ ಎಂದರೆ ಸರಿ. ನಿ. ಪಿ. 17 ರಲ್ಲಿರುವ ದಾಖಲೆ ಬಗ್ಗೆ ಓದಿ ತಿಳಿಸಿದ್ದು ಸರಿ ಎಂದು ಹೇಳಿರುತ್ತಾರೆ.  ದಾವಾಸ್ತಿಯ ಸರ್ವೆ ನಂ. 348/51. ನಿ. ಪಿ. 16 ಆರ್ ಟಿ ಸಿ ಯಲ್ಲಿ 1 ನೇ ಪ್ರತಿವಾದಿಯ ಹೆಸರು ಇದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ವತ್ತು ಯಾವ ವರ್ಷದಲ್ಲಿ ಯಾರು ಖರೀದಿಸಿದರೂ ಎಂದು ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆ ತಾಯಿ ದಾವಾಸ್ತಿಯಲ್ಲಿ ಮನೆ ಕಟ್ಟಿ ಅಲ್ಲಿ ವಾಸವಾಗಿದ್ದರು ಎಂದರೆ ಗೊತ್ತಿಲ್ಲ. ದಾವಾಸ್ತಿಯಲ್ಲಿ ಮನೆ ಇದೆ, ಆದರೆ ಯಾರು ಕಟ್ಟಿದರೂ ಗೊತ್ತಿಲ್ಲ. 2 ನೇ ವಾದಿಯಂತೆ ನಾನು ಸಾಕ್ಷ್ಯವನ್ನು ಕೊಡುತ್ತಿದ್ದೇನೆ. ಪ್ರಕರಣದ ವಿಚಾರಗಳೆಲ್ಲ 2 ನೇ ವಾದಿ ನನಗೆ ತಿಳಿಸಿದರು ಎಂದರೆ ಸರಿ.

ನನ್ನ ಪ್ರಮಾಣ  ಪತ್ರ ಯಾರು ಮಾಡಿಸಿದರೂ ನನಗೆ ಗೊತ್ತಿಲ್ಲ ನಾನು ಅದನ್ನು ಓದಿ ನೋಡಲಿಲ್ಲ, ಅದರಲ್ಲಿರುವ ಅಂಶಗಳು ಓದಿ ಕೂಡ ನನಗೆ ಹೇಳಲಿಲ್ಲ ಎಂದರೆ ಸರಿ. 1 ನೇ ವಾದಿಯ ಗಂಡ ನನಗೆ ಗೊತ್ತು, ಅವರು 15 ವರ್ಷ ಮೇಲ್ಪಟ್ಟು  ತೀರಿಕೊಂಡಿರುತ್ತಾರೆ. 1 ನೇ ವಾದಿಯ ಗಂಡ ಕುಟ್ಟ ಗ್ರಾಮದಲ್ಲಿ Faith estate ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1 ನೇ ವಾದಿಯ ಗಂಡ ಮೂಲತಃ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. 1 ನೇ ವಾದಿಗೆ ಜಾನ್ ಜೋಶು ಮಗ ಇದ್ದ, ಈಗ ತೀರಿಕೊಂಡಿದ್ದಾನೆ ಎಂದರೆ ಸರಿ. ಸತ್ತ ಮಗನಿಗೆ ಮಕ್ಕಳಿದ್ದಾರೆ ಎಂದರೆ ಸರಿ. 1 ನೇ ವಾದಿಗೆ  ಐಲಿನ್ ಮಗಳು ಇದ್ದು, ಪೂಚೆಕಲ್ಲುಗೆ ಮದುವೆ ಮಾಡಿಕೊಟ್ಟಿರುತ್ತಾರೆ. ನನಗೆ ಈ ಪ್ರಕರಣದ ವಿಚಾರಗಳು ಏನು ಗೊತ್ತಿಲ್ಲ, 2 ನೇ ವಾದಿ ನನ್ನ ನಂಬಿಕಸ್ಥನಾದ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

sd/-

ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.